ಪಿಲಿಕುಳ
PILIKULA

# ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ

# PILIKULA DEVELOPMENT AUTHORITY

ಸಂ: ಪಿ.ಪ್ರಾ.ವಿ.ಕೆ/ವಿವ/40/ವಾಹನ/2017-18 ದಿನಾಂಕ: 24.05.2021

## ಟೆಂಡರ್ ಅಧಿಸೂಚನೆ

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ವಿಜ್ಞಾನ ಕೇಂದ್ರದ ಉಪಯೋಗಕ್ಕಾಗಿ 2015ರ ನಂತರದ ಮಾಡೆಲಿನ ಒಂದು ಕಾರನ್ನು ಬಾಡಿಗೆ ನೆಲೆಯಲ್ಲಿ 01.07.2021 ರಿಂದ 30.06.2022ರ ಅವಧಿಗೆ ಒದಗಿಸಲು ಈ ಕೆಳಕಾಣಿಸಿದ ನಿಬಂಧನೆಗಳ ಅನುಸಾರವಾಗಿ ಆಸಕ್ತ ವಾಹನ ಮಾಲಿಕರಿಂದ ಟೆಂಡರನ್ನು ಆಯುಕ್ತರು, ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ಮೂಡುಶೆಡ್ಡೆ, ಮಂಗಳೂರು ಇವರು ಆಹ್ವಾನಿಸಿದ್ದಾರೆ.

1. 2015 ಹಾಗೂ ನಂತರದ ಮಾಡೆಲ್‌ನ 4+1 ಸೀಟಿನ ಸುಸ್ಥಿತಿಯಲ್ಲಿರುವ ಹವಾನಿಯಂತ್ರಿತ ವಾಹನವಾಗಿರಬೇಕು. ಮಾಲಿಕರೇ ಚಾಲಕನಾಗಿರುವವರು ಟೆಂಡರು ಸಲ್ಲಿಸಲು ಅರ್ಹರಾಗಿರುತ್ತಾರೆ.
2. ವಾಹನವನ್ನು ಪೂರ್ತಿ ಸಂಸ್ಥೆಯ ಅಧೀನದಲ್ಲಿ ಅದರ ಉಪಯೋಗಕ್ಕೆ ದಿನಕ್ಕೆ12 ಗಂಟೆಗಳ ಸೇವೆಗೆ ವಹಿಸಿಕೊಡ ತಕ್ಕದ್ದು. ಅಗತ್ಯವಿದ್ದಲ್ಲಿ ರಾತ್ರಿ ವೇಳೆಯಲ್ಲಿ ಕೂಡಾ ನೀಡಬೇಕು.
3. ವಾಹನದ ಇಂಧನ, ದುರಸ್ತಿ ವೆಚ್ಚ, ಚಾಲಕರ ವೇತನ ಭವಿಷ್ಯ ನಿಧಿ, ಇನ್ಸುರೆನ್ಸ್, ತೆರಿಗೆ(ಹೊರರಾಜ್ಯಕ್ಕೆ ಪ್ರಯಾಣಿಸುವಾಗ ಪಾವತಿಸಬೇಕಾದ ತೆರಿಗೆ ಸೇರಿ), ಇತ್ಯಾದಿಗಳನ್ನು ಪೂರ್ತಿ ವಾಹನ ಮಾಲೀಕರ ವತಿಯಿಂದಲೇ ಭರಿಸತಕ್ಕದ್ದು. ಯಾವುದೇ ರೀತಿಯ ವೆಚ್ಚವನ್ನು ನೀಡಲಾಗುವುದಿಲ್ಲ.
4. ವಾಹನವನ್ನು ಕನಿಷ್ಠ ಒಂದು ತಿಂಗಳಿಗೆ 2000 ಕಿ.ಮೀ ಚಲಾಯಿಸಲು ತಿಂಗಳೊಂದರ ಒಟ್ಟು ಬಾಡಿಗೆ ದರವನ್ನು ನಮೂದಿಸಬೇಕು. 2000 ಕಿ.ಮೀ ಗಿಂತ ಮೀರಿ ಚಲಾಯಿಸಿದಲ್ಲಿ ಹೆಚ್ಚಿಗೆ ಚಲಾಯಿಸಿದ ದೂರಕ್ಕೆ ಕಿ.ಮೀ.1 ಕ್ಕೆ ರೂ 10/- ನೀಡಲಾಗುವುದು.
5. ವಾಹನವನ್ನು ದುರಸ್ತಿಗೆ ಅಥವಾ ಇನ್ನಿತರ ಯಾವುದಾದರೂ ಕೆಲಸಗಳಿಗೆ ವಾಹನ ಮಾಲೀಕರ ವತಿಯಿಂದ ನಿಲ್ಲಿಸಿದಲ್ಲಿ ತಕ್ಷಣ ವಿಳಂಬವಿಲ್ಲದೇ ತತ್ಸಮಾನವಾದ ಸುಸ್ಥಿತಿಯಲ್ಲಿರುವ ಬದಲಿ ವಾಹನವನ್ನು ವಾಹನದ ಮಾಲೀಕರು ತಕ್ಷಣ ಒದಗಿಸಬೇಕಾಗುತ್ತದೆ.
6. ಟೆಂಡರ್ ಅವಧಿ ದಿನಾಂಕ: 01.07.2021 ರಿಂದ 30.06.2022ರ ತನಕ ಇರುತ್ತದೆ. ಅಗತ್ಯವೆಂದು ಕಂಡುಬಂದಲ್ಲಿ ಹಾಗೂ ವಾಹನ ಸೇವೆಯು ತೃಪ್ತಿಕರವಾಗಿದ್ದಲ್ಲಿ ಸಂಸ್ಥೆಯ ಅಧಿಕಾರಿಗಳ/ ಆಯುಕ್ತರವರ ವಿವೇಚನೆಯಿಂದ ಮುಂದುವರಿಸಲಾಗುವುದು.
7. ದರಪಟ್ಟಿಯನ್ನು ಈ ಕಛೇರಿಯಲ್ಲಿ ದಿ:08.06.2021 ರಂದು (ಮಂಗಳವಾರ) ಅಪರಾಹ್ನ 3.00 ಗಂಟೆಯ ತನಕ ಲಗ್ತೀಕರಿಸಿರುವ ನಮೂನೆಯಲ್ಲಿ ಸ್ವೀಕರಿಸಲಾಗುವುದು.
8. ವಾಹನದ ದಾಖಲಾತಿಯನ್ನು (ಆರ್.ಸಿ, ಡ್ರೈವಿಂಗ್ ಲೈಸೆನ್ಸ್, ಇನ್ಸೂರೆನ್ಸ್) ದರಪಟ್ಟಿಯ ಜೊತೆಯಲ್ಲಿ ಲಗ್ತೀಕರಿಸತಕ್ಕದ್ದು.
9. ಯಾವುದೇ ದಾವೆಗಳಿಗೆ ಒಳಪಟ್ಟ ಮತ್ತು ವಿರೂಪಗೊಂಡ ವಾಹನವನ್ನು ಬಾಡಿಗೆಗೆ ನೀಡಲು ಅವಕಾಶವಿರುವುದಿಲ್ಲ.
10. ಸ್ವೀಕೃತಿಯಾದ ದರಪಟ್ಟಿಯನ್ನು ದಿ:08.06.2021 ರಂದು (ಮಂಗಳವಾರ) ಅಪರಾಹ್ನ 4.00 ಗಂಟೆಗೆ ಆಯುಕ್ತರವರ ಕೊಠಡಿಯಲ್ಲಿ ಹಾಜರಿದ್ದ ಟೆಂಡರುದಾರರ ಸಮಕ್ಷಮದಲ್ಲಿ ತೆರೆಯಲಾಗುವುದು. ಮತ್ತು ಯಾವುದೇ ಕಾರಣಗಳನ್ನು ನೀಡದೇ ದರಪಟ್ಟಿಯನ್ನು ತಿರಸ್ಕರಿಸಲು ಆಯುಕ್ತರವರಿಗೆ ಅಧಿಕಾರವಿರುತ್ತದೆ.

11. ಟೆಂಡರ್ ದರಪಟ್ಟಿಯ ಕವರ್ ಮೊಹರು ಹಾಕಿ **"ವಾಹನವನ್ನು ಹೊರಗುತ್ತಿಗೆ ನೀಡುವರೇ ಟೆಂಡರ್"** ಎಂದು ಬರೆಯಬೇಕು.
12. ಈ ಹಿಂದೆ ಟೆಂಡರ್ ಮೂಲಕ ವಾಹನವನ್ನು ಒದಗಿಸಿ ನಂತರ ಟೆಂಡರ್ ಶರ್ತಗಳನ್ನು ಪೂರೈಸದೇ ಇರುವವರಿಗೆ ಈಗ ಟೆಂಡರ್ ಸಲ್ಲಿಸಲು ಅವಕಾಶವಿರುವುದಿಲ್ಲ.
13. ಕಛೇರಿಯಿಂದ ವಾಹನದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಪಾಲಿಸಬೇಕು ಹಾಗೂ ಕಛೇರಿಯ ಪೂರ್ಣ ಬಳಕೆಗೆ ವಾಹನವು ಚಾಲಕರೊಂದಿಗೆ ಲಭ್ಯವಾಗಬೇಕು.

**ಟೆಂಡರು ಸಲ್ಲಿಸುವ ನಮೂನೆಯನ್ನು ಲಗ್ತೀಕರಿಸಿದೆ.**

ಆಯುಕ್ತರು
ಪಿಲಿಕುಳ ಅಭಿವೃದ್ದಿ ಪ್ರಾಧಿಕಾರ
ಮೂಡುಶೆಡ್ಡೆ, ಮಂಗಳೂರು

ರಿಗೆ,

1. ಸಂಬಂಧಪಟ್ಟ ಗುತ್ತಿಗೆದಾರರಿಗೆ (ಪಟ್ಟಿ ಪ್ರಕಾರ)
2. ನಿರ್ದೇಶಕರು, ಪ್ರಾದೇಶಿಕ ವಿಜ್ಞಾನ ಕೇಂದ್ರ, ಪಿಲಿಕುಳ ಅಭಿವೃದ್ದಿ ಪ್ರಾಧಿಕಾರ.
3. ಪಿಲಿಕುಳ ಅಭಿವೃದ್ದಿ ಪ್ರಾಧಿಕಾರದ ಇತರ ವಿಭಾಗದ ಅಧಿಕಾರಿಗಳಿಗೆ ಪ್ರಚಾರಕ್ಕಾಗಿ.
4. ಪಿಲಿಕುಳ ಅಭಿವೃದ್ದಿ ಪ್ರಾಧಿಕಾರ ಕಛೇರಿಯ ಸೂಚನಾ ಫಲಕಕ್ಕೆ.

ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು-575028, ದೂರವಾಣಿ: 0824-2263565, ಇ-ಮೇಲ್: pilikula96@gmail.com, ವೆಬ್‌ಸೈಟ್: www.pilikula.com
Administrative Office: Moodushedde, Mangaluru-575028, Ph: 0824-2263565, e-mail:pilikula96@gmail.com, website: www.pilikula.com